# ಸ್ವರ್ಗ ಮತ್ತು ನರಕ

ಪ್ರಪಂಚದ ಎಲ್ಲ ಆಸ್ತಿಕ ಧರ್ಮಗಳು ಮನುಷ್ಯ ಜೀವಿಗೆ ಇಹಲೋಕದ ನಂತರ 'ಏನು' ಎಂಬ ಪ್ರಶ್ನೆಯನ್ನು ಮುಂದಿಟ್ಟುಕೊಂಡು ಜಿಜ್ಞಾಸೆ ನಡೆಸಿವೆ. ಯಾಕೆಂದರೆ ಇಹದಲ್ಲಿ ಮನುಷ್ಯನನ್ನು ಜೀವನವಿಡೀ 'ಒಳಿತು ಮತ್ತು ಕೆಡುಕು'ಗಳೆಂಬ ಗುಣಸ್ವಭಾವಗಳು ಆವರಿಸಿಕೊಂಡು ನಿಯಂತ್ರಿಸುತ್ತವೆ. ಇವುಗಳಲ್ಲಿ ಯಾವ ಕಡೆಗೆ ಜೀವಿಗಳು ಹೆಚ್ಚು ತೂಗುತ್ತಾರೋ ಅತ್ತ ಕಡೆ ಅವರ ಮುಂದಿನ ತಾಣ ನಿಶ್ಚಯವಾಗುತ್ತದೆ ಎಂದು ವಾಡಿಕೆಯಂತೆ ನಂಬಿಕೊಂಡು ಬರಲಾಗುತ್ತಿದೆ. ಆದರೆ ಸ್ವರ್ಗ ಎಂದರೆ ಏನು? ನರಕ ಎಂದರೆ ಹೇಗೆ? ಎಂಬ ಮಾನವಾನುಭವಕ್ಕೆ ಅತೀತವಾದ ಕಲ್ಪನೆ ಯಾವ ಧರ್ಮದಲ್ಲಿಯೂ ಕಾಣುವುದಿಲ್ಲ.

ಆತ್ಮದ ಇರುವನ್ನು ಒಪ್ಪಿಕೊಳ್ಳುವ ಧರ್ಮಗಳು ಗೋರಿಯಿಂದಾಚೆಗಿನ ಅಸ್ತಿತ್ವವನ್ನು ಕುರಿತು ಚಿಂತಿಸಿವೆ. ಪುರಾತನ ಝೊರಾಷ್ಟ್ರಿಯನ್ ಧರ್ಮದಲ್ಲಿ ಸಾವಿನ ನಂತರ ನಾಲ್ಕನೆಯ ದಿನ ವ್ಯಕ್ತಿಯು 'ವಿಭಜಕ ಸೇತುವೆ'ಯ ಮೇಲೆ ನಡೆದು ಹೋಗುತ್ತಾನೆ. ಅಲ್ಲಿ ಒಳಿತಿನ ಹೊರೆ ಹೊತ್ತವನನ್ನು ಯೌವನ ತುಂಬಿದ ಸುರಾಂಗನೆಯೊಬ್ಬಳು ಆಹ್ವಾನಿಸುತ್ತಾಳೆ. ಕೆಡುಕಿನ ಮೂಟೆ ಹೊತ್ತವನು ಸೇತುವೆಯಿಂದ ಕೆಳಗೆ ಬೀಳುತ್ತಾನೆ. ಇಸ್ಲಾಮ್ ಧರ್ಮದಲ್ಲಿ ಸ್ವರ್ಗವೆಂದರೆ ಪ್ಯಾರಡೈಸ್; ಅಂದರೆ ಕೋಟೆಯಿಂದ ಸುತ್ತುವರಿದ ನಂದನವನ. ನದಿ ತಟದಲ್ಲಿರುವ ಘಮಘಮಿಸುವ ಮಲ್ಲಿಗೆಯ ಮಂದಾರದೊಳಗೆ ಹಂಸತೂಲಿಕಾತಲ್ಪದಲ್ಲಿ ದೇಹ ಚಾಚಿದರೆ, ನಸುನಾಚುವ ಕನ್ಯೆಯರು ಬೆಳ್ಳಿ ಬಟ್ಟಲಿನಲ್ಲಿ ಅಮೃತವನ್ನು ಉಣಿಸುತ್ತಾರೆ. ಇತರ ಸೆಮೆಟಿಕ್ ಧರ್ಮಗಳಾದ ಕ್ರೈಸ್ತ ಮತ್ತು ಯಹೂದಿ ಧರ್ಮಗಳಲ್ಲಿಯೂ ಇದೇ ಪರಿಕಲ್ಪನೆ ಇದೆ. ದೇವರ ಸನ್ನಿಧಿಯಲ್ಲಿ ಹಾಡು, ಕುಣಿತ. ಅಲ್ಲಿ ನೋವಿಲ್ಲ, ಕಣ್ಣೀರಿಲ್ಲ. ಸಾವಿನ ಭಯವಂತೂ ಇಲ್ಲವೇ ಇಲ್ಲ.

ಪೌರಾತ್ಯ ಧರ್ಮಗಳಲ್ಲಿ ಪುನರ್ಜನ್ಮದ ಕಲ್ಪನೆಯಿರುವುದರಿಂದ ಸ್ವರ್ಗ ಮತ್ತು ನರಕಗಳ ನಡುವೆ ಕೆಲವು ತಂಗುದಾಣಗಳಿವೆ ಎನ್ನಬಹುದು. ವೈದಿಕ ಧರ್ಮ ಹದಿನಾಲ್ಕು ಲೋಕಗಳ ಬಗ್ಗೆ ಹೇಳುತ್ತದೆ. ಮೇಲಿನ ತುದಿಯಲ್ಲಿ ಸತ್ಯಲೋಕ ಮತ್ತು ಕೆಳತುದಿಯಲ್ಲಿ ಪಾತಾಳ ಲೋಕಗಳಿವೆ. ಇವೆರಡೂ ಸ್ವರ್ಗ ಮತ್ತು ನರಕಗಳನ್ನು ಪ್ರತಿನಿಧಿಸುತ್ತವೆ. ಜೀವಿಗಳು ತಮ್ಮ ಕರ್ಮಾನುಸಾರ ಆಯಾ ಲೋಕವನ್ನು ಸೇರುತ್ತಾರೆ. ಸ್ವರ್ಗಗಳಲ್ಲಿ ಹಿಂದೂ ಧರ್ಮದ ಸ್ವರ್ಗ ಅತಿ ಧಾರಾಳ, ವೈಭವೋಪೇತವೆಂದು, ನರಕಗಳಲ್ಲಿ ಝೊರಾಷ್ಟ್ರಿಯನ್ ನರಕ ಅತಿ ಹಿಂಸಕ, ಭಯಾನಕವೆಂದೂ ಪ್ರತೀತಿಯಿದೆ.

ಮೇಲಿನ ವಿವರಗಳಿಂದ ತಿಳಿದುಬರುವುದೇನೆಂದರೆ ಸ್ವರ್ಗವೆಂದರೆ ಯೌವನ, ಜತೆಗೆ ಮದಿರೆ ಮತ್ತು ಮಾನಿನಿ. ಅಂದರೆ ವಿಷಯ ಸುಖ (**Sensual pleasure**). ಇಹಲೋಕದ ಬದುಕಿನಲ್ಲಿ ಯಾವುದನ್ನು ಮಾಡಿದರೆ ಪಾಪಕಾರ್ಯವೆನಿಸುವುದೋ ಅದೇ ಪರಲೋಕದಲ್ಲಿ ಪುಣ್ಯಕಾರ್ಯಕ್ಕೆ ಸಿಗುವ ಇನಾಮು! ಇಲ್ಲಿಯೆ ಮನುಷ್ಯನ ಕಲ್ಪನಾ ದೌರ್ಬಲ್ಯ ಎದ್ದುಕಾಣುವುದು. ನಾವು ಇಂದ್ರಿಯಗಳ ಮೂಲಕ ಅನುಭವಿಸಲಾರದ್ದು ಎಂದಿಗೂ ಕನಸಿನಲ್ಲಿ ಬರಲಾರದು. ಉದಾಹರಣೆಗೆ ನಾವು ಅಮೆರಿಕೆಯನ್ನು ಖುದ್ದಾಗಿ ಹೋಗಿ ನೋಡಿರದಿದ್ದರೆ ನಿದ್ರೆಯಲ್ಲಿ ನಮಗೆ ಅಮೆರಿಕೆಯ ಕನಸು ಬೀಳಲಾರದು. ಆದರೆ ನಮ್ಮ ಕಲ್ಪನೆಯಲ್ಲಿ ಅಮೆರಿಕೆಯ ಕಲ್ಪಿತ ರೂಪವೊಂದಿರುತ್ತದೆ. ಅದು ನಾವು ನೋಡಿರುವ ಬೆಂಗಳೂರಿನ ಅಥವಾ ಇನ್ನಾವುದೋ ದೊಡ್ಡ ಊರಿನ ಅತ್ಯಾಕರ್ಷಕವೆನಿಸುವ ತಾಣವಾಗಿರುತ್ತದೆ. ಹಾಗಿದೆ ನಮ್ಮ ಸ್ವರ್ಗದ ಪರಿಕಲ್ಪನೆ. ಹಾಗೆಯೆ ನರಕವೂ ಸಹ. ನಾವು ಭೂಲೋಕದಲ್ಲಿ ನೋಡಿರಬಹುದಾದ ಶಿಕ್ಷೆಗಳ ಅತ್ಯುಗ್ರ ರೂಪವನ್ನು, ಅದರ ಯಾತನೆಯನ್ನು ನರಕವೆಂದು ಭಾವಿಸಿಕೊಳ್ಳುತ್ತೇವೆ.

ಆದ್ದರಿಂದಲೇ ಬುದ್ಧ ಸ್ವರ್ಗ, ನರಕಗಳನ್ನು ಕುರಿತು ಯಾವ ಅಭಿಪ್ರಾಯವನ್ನು ನೀಡಲಿಲ್ಲ, ತಟಸ್ಥವಾಗಿದ್ದ. ಬೌದ್ಧರ ಸ್ವರ್ಗ, ನರಕಗಳ ಪರಿಕಲ್ಪನೆ ಇತರ ಧರ್ಮಗಳಿಗಿಂತ ಭಿನ್ನವಾಗಿದೆ. ಕೆಡುಕು ಮಾನವ ದೌರ್ಬಲ್ಯವೇ ಆದ್ದರಿಂದ ಒಬ್ಬ ವ್ಯಕ್ತಿಯನ್ನು ಶಾಶ್ವತವಾಗಿ ನರಕದಲ್ಲಿ ಬಂಧಿಸಿಡಲು ಬೌದ್ಧ ಧರ್ಮ ಒಪ್ಪುವುದಿಲ್ಲ. ವಿಷಯ ಸುಖವೇ ದೇವರ ಅಂತಿಮ ಪ್ರಸಾದವಲ್ಲ. ಬುದ್ಧನ ಉಪದೇಶಗಳ ಪ್ರಕಾರ ಸ್ವರ್ಗ, ನರಕಗಳು ಇಹಲೋಕದಲ್ಲಿಯೇ ಇವೆ. ಬುದ್ಧಿವಂತರು ಸ್ವರ್ಗವನ್ನು, ಮೂರ್ಖರು ನರಕವನ್ನು ಇಲ್ಲಿಯೇ ಸೃಷ್ಟಿಸಿಕೊಳ್ಳುತ್ತಾರೆ. ಅವನ ಪ್ರಕಾರ ಸಮುದ್ರದ ತಳದಲ್ಲಿ ಒಂದು ಪಾತಾಳ ಲೋಕವಿದೆ ಎಂಬುದು ಸುಳ್ಳು ಮತ್ತು ಆಧಾರವಿಲ್ಲದ್ದು. ನರಕವೆಂದರೆ ನೋವು ತುಂಬಿದ ಸಂವೇದನೆಗಳು ((**Painful feelings**), ಸ್ವರ್ಗವೆಂದರೆ ಸುಖಮಯ ಸಂವೇದನೆಗಳು.

ಮನುಷ್ಯನನ್ನು ಸದಾಕಾಲ ಸುಡುತ್ತಿರುವ (ಕಾಡುವ) ಹನ್ನೊಂದು ತೆರನಾದ ಭೌತಿಕ ಮತ್ತು ಮಾನಸಿಕ ಬೇನೆಗಳಿವೆ ಎಂದು ಬುದ್ಧ ಹೇಳುತ್ತಾನೆ. ಅವು; ಕಾಮ, ಕ್ರೋಧ, ದ್ವೇಷ, ಮತ್ಸರ, ಮೋಹ. ರೋಗ, ಮುಪ್ಪು, ಸಾವು. ಚಿಂತೆ, ದೈಹಿಕ ಮತ್ತು ಮಾನಸಿಕ ನೋವು, ಶೋಕ. ಇವು ನಮ್ಮೊಳಗೆ ಸದಾ ಉರಿಯುವ ಬೆಂಕಿಯ ಉಂಡೆಗಳು. ಇವುಗಳಿಂದ ಮನುಷ್ಯ ಇಡೀ ಲೋಕವನ್ನು ಸುಡಬಹುದು. ಆದ್ದರಿಂದ ಸ್ವರ್ಗ, ನರಕಗಳನ್ನು ಕುರಿತು ಹೀಗೂ ಸಂಗ್ರಹಿಸಿ ಹೇಳಬಹುದು. ಎಲ್ಲಿ ಅತಿಯಾಗಿ ದುಃಖ ಸಂಚಯವಾಗಿರುವುದೊ ಅದು ನರಕ. ಸ್ವರ್ಗವೆಂದರೆ ಎಲ್ಲಿ ಸುಖ ಸಂತೋಷಗಳನ್ನು ವ್ಯಾಪಕವಾಗಿ ಹಂಚಿಕೊಳ್ಳಲಾಗುವುದೊ ಅದು.

■ **ಮೂಚಿ**

## ಮಾತೇ ಮುತ್ತು

★ ಪ್ರತಿಯೊಂದು ಶ್ರೇಷ್ಠ ಕೆಲಸವೂ ಆರಂಭದಲ್ಲಿ ಅಸಾಧ್ಯವೆಂದೇ ತೋರುತ್ತದೆ.
-ಥಾಮಸ್ ಕಾರ್ಲೈಲ್

★ ಶ್ರೇಷ್ಠ ಕನಸುಗಾರರ ದೊಡ್ಡ ಕನಸುಗಳೆಲ್ಲವೂ ಸಾಕಾರಗೊಂಡಿವೆ.
-ಡಾ. ಎ.ಪಿ.ಜೆ.ಅಬ್ದುಲ್ ಕಲಾಮ್

★ ಧೈರ್ಯದ ಕೊರತೆ ಇರುವವರು ತಮ್ಮನ್ನು ಸಮರ್ಥಿಸಿಕೊಳ್ಳಲು ತತ್ವಜ್ಞಾನವೊಂದನ್ನು ಹುಡುಕಿಕೊಳ್ಳುತ್ತಾರೆ.
-ಆಲ್ಬರ್ಟ್ ಕಾಮೂ

★ ಕಲಿಯುವುದಕ್ಕಿಂತ ಸೃಷ್ಟಿಸುವುದು ಉತ್ತಮ. ಸೃಷ್ಟಿಶೀಲತೆಯೇ ಬದುಕಿನ ತಿರುಳು.
-ಜೂಲಿಯಸ್ ಸೀಝರ್

★ ಶತ್ರುಗಳನ್ನೂ ಮಿತ್ರರಾಗಿಸಬಲ್ಲ ಏಕೈಕ ಶಕ್ತಿಯೆಂದರೆ ಪ್ರೀತಿ.
-ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್

★ ನಂಬಿಕೆಯೆನ್ನುವುದು ಹೃದಯದೊಳಗಿನ ಓಯಸಿಸ್. ಅದನ್ನು ಆಲೋಚನೆಯೆಂಬ ಯಾವ ಕ್ಯಾರವಾನ್‌ಗಳೂ ತಲುಪಲಾಗದು.
—ಖಲೀಲ್ ಗಿಬ್ರಾನ್

★ ಕಣ್ಣೀರು ಹೃದಯದಿಂದ ಬರುತ್ತದೆ, ಮೆದುಳಿನಿಂದಲ್ಲ.
-ಲಿಯೊನಾರ್ಡೊ ಡ ವಿಂಚಿ

★ ತಪ್ಪುಗಳು ಯಾವತ್ತೂ ಕ್ಷಮೆಗೆ ಅರ್ಹ. ಆದರೆ ತಪ್ಪು ಮಾಡಿದಾತ ಅದನ್ನು ಒಪ್ಪಿಕೊಳ್ಳುವ ಧೈರ್ಯ ಮಾಡಿದರೆ ಮಾತ್ರ.
-ಬ್ರೂಸ್ ಲೀ

★ ಸಂತೋಷ ಎನ್ನುವುದು ರೆಡಿಮೇಡ್ ಸಿಗುವುದಿಲ್ಲ. ಅದು ನಿಮ್ಮ ಕ್ರಿಯೆಯಿಂದ ಹುಟ್ಟುತ್ತದೆ.
-ದಲೈ ಲಾಮಾ

★ ಕಾಯುವುದು ದುಃಖದಾಯಕ, ಮರೆಯುವುದೂ ದುಃಖದಾಯಕ. ಆದರೆ ಇದೆರಡರಲ್ಲಿ ಯಾವುದನ್ನು ಮಾಡಬೇಕೆನ್ನುವುದು ಗೊತ್ತಾಗದೆ ಇರುವುದು ನಿಜಕ್ಕೂ ದುರಂತ.
-ಪಾವ್ಲೊ ಕೊಯೆಲೊ

★ ಇತಿಹಾಸವೆಂದರೆ ಸತ್ತವರ ಮೇಲೆ ಕಟ್ಟುವ ಗೋರಿಯಲ್ಲ, ಅದು ಆಳವಾದ ತತ್ವಜ್ಞಾನ.
-ಆಲೂರ ವೆಂಕಟರಾಯ

★ ನಾನು ಬುದ್ಧಿವಂತ ಎನ್ನುವುದು ನನಗೆ ಗೊತ್ತು. ಏಕೆಂದರೆ ನನಗೆ ಏನೂ ಗೊತ್ತಿಲ್ಲ ಎನ್ನುವುದು ನನಗೆ ಗೊತ್ತು.
-ಸಾಕ್ರೆಟಿಸ್

★ ನಾವು ಬದುಕನ್ನು ಪ್ರೀತಿಸುತ್ತೇವೆ— ಏಕೆಂದರೆ ಬದುಕಲು ಒಗ್ಗಿದ್ದೇವೆ ಎಂದಲ್ಲ; ಪ್ರೀತಿಸಲು ಒಗ್ಗಿಕೊಂಡಿದ್ದೇವೆ ಎಂದು.
-ಫ್ರೆಡ್ರಿಕ್ ನೀಟ್ಸೆ